**ಸೋಮವಾರಪೇಟೆ ಪ್ರಧಾನ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಸಿಸಿ ನಂಃ615/2023**

**ಪಿರ್ಯಾದಿ ಃ** ಎಸ್.ಸಿ.ಪುಟ್ಟಸ್ವಾಮಿ

**ಃವಿಃ**

**ಆರೋಪಿ ಃ** ಲೋಕೇಶ್ ಮತ್ತು ಇನ್ನೊಬ್ಬರು

**ಆಪಾದನೆ**

**ಶ್ರೀ.ಕೆ.ಗೋಪಾಲ ಕೃಷ್ಣ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ. ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ**

**ಆರೋಪಿ ಃ** **1** ನೇ ಆರೋಪಿ ಲೋಕೇಶ್ ಹೆಚ್.ಎಂ ಸುಮಾರು **57** ವರ್ಷ ತಂದೆಃ ಮಲ್ಲೇಶಪ್ಪ, ಚೆರ್ಮೆನ್ ಎಂ.ಎ ಎಸ್ ಸಸ್ ಟೈನೇಬಲ್ ಕಾಫಿ ಪ್ರೊಡ್ಯೂಸರ್ ಕಂಪನಿ ಲೀ, **2** ನೇ ಆರೋಪಿ ಬಿ.ಗಿರೀಶ್, ಸುಮಾರು **48** ವರ್ಷ, ತಂದೆಃ ಭಾಸ್ಕರ, ಸಿ ಇ ಒ ಎಂ.ಎ ಎಸ್ ಸಸ್ ಟೈನೇಬಲ್ ಕಾಫಿ ಪ್ರೊಡ್ಯೂಸರ್ ಕಂಪನಿ ಲೀ, ಮುಖ್ಯ ಶಾಖೆಃ ಬಿ.ಎಂ.ರಸ್ತೆ, ಬಾಳ್ಳುಪೇಟೆ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

**ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೇನೆ.**

**ನೀವು ಪಿರ್ಯಾದುದಾರರಿಗೆ** ರೂ.**90,176/-**ಗಳನ್ನು **ಕೊಡಬೇಕಾಗಿದ್ದು, ಸದರಿ ಹಣವನ್ನು ಆದಷ್ಟು ಬೇಗ ಮರುಪಾವತಿ ಮಾಡುವುದಾಗಿ ಆಶ್ವಾಸನೆ ನೀಡಿರುವಿರಿ. ಸದ್ರಿ** ಹಣ **ದ ಮರುಪಾವತಿಗಾಗಿ ದಿನಾಂಕಃ 31.08.2023** ಅನ್ನು ನಮೂದಿಸಿ **ಬ್ಯಾಂಕ್ ಆಫ್ ಬರೋಡ, ಬಾಳ್ಳುಪೇಟೆ ಶಾಖೆಯ** ಚೆಕ್ ನಂಃ **000793** ರಲ್ಲಿ ರೂ.**90,176/-**ಗಳೆಂದು ಬರೆದು **ಚೆಕ್‌ನ್ನು ಪಿರ್ಯಾದಿ ಹೆಸರಿಗೆ ನಗದಾಗುವಂತೆ ನೀಡಿರುತ್ತಿರಿ. ಪಿರ್ಯಾಧಿ ಸದ್ರಿ ಚೆಕ್ಕನ್ನು** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, **ಸೋಮವಾರಪೇಟೆ** ಮುಖ್ಯ ಶಾಖೆಯ **ಹಾಜರುಪಡಿಸಿದಾಗ ಸದ್ರಿ ಚೆಕ್ಕು "funds Insufficient"** ಎಂಬ **ಹಿಂಬರಹದೊಂದಿಗೆ ವಾಪಾಸ್ಸು ಬಂದಿರುತ್ತದೆ. ನಂತರ ಕಾನೂನು ರೀತ್ಯ ದಿನಾಂಕಃ 15.09.2023 ರಂದು ನೊಂದಾಯಿತ** ಹಾಗೂ ಜರೂರು **ಅಂಚೆಯ ಮೂಲಕ ನಿಮಗೆ ನೋಟಿಸನ್ನು ನೀಡಿದರು ನೀವು ಹಣವನ್ನು ಪಾವತಿಸಿಲ್ಲ ಹಾಗೂ ಉತ್ತರವನ್ನು ನೀಡಿಲ್ಲ. ಇದು 138, 142 ಎನ್.ಐ.ಆ್ಯಕ್ಟ ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿದ್ದೀರಿ.**

**ಪ್ರಃ1 ಈಗ ಓದಿ ವಿವರಿಸಿದ ಅಪಾದನೆ ತಿಳಿದಿದೆಯಾ?**
**ಉಃ**

**ಪ್ರಃ2 ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?**
**ಉಃ**

ಸಹಿ/-

ದಿಃ **01.07.2024** **ಪ್ರ ದಂ ನ್ಯಾ ದಂ ,ಸೋಮವಾರಪೇಟೆ**